ಇ ಸಿ ಎ ನಂ. 01/2019

ಪಿ ಡಬ್ಲ್ಯೂ: 2

ದಿನಾಂಕ 21/02/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ **3** ನೇ ಎದುರುದಾರರ ಪರಃ ಶ್ರೀ ಸಿ ಒ ವೈ ವಕೀಲರಿಂದಃ</u>

ನಾನು, ಮೋಹನ, ಪ್ರಸಾದ್ ಮತ್ತು ರವಿ ನಾಲ್ಕು ಜನ ರೋಡ್ ಕೆಲಸಕ್ಕೆಂದು ಟ್ರಾಕ್ಟರ್ ನಲ್ಲಿ ಹೋಗಿರುತ್ತೇವೆ. ನಾವು ಈರೇಶ್ ಎಂಬ ಮೇಸ್ತ್ರಿ ಬಳಿ ಕೆಲಸ ಮಾಡುತ್ತಿದ್ದೇವು. ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರು ನನ್ನ ಹೇಳಿಕೆ ಪಡೆದಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಕ್ರಿಮಿನಲ್ ಪ್ರಕರಣದಲ್ಲಿ ನಾನು ಸಾಕ್ಷ್ಯದಾರನಾಗಿ ಹಾಜರಾಗಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನಾನಾಗಲಿ, ಅಭಿಷೇಕ್ ರವರಾಗಲಿ ಎಂದಿಗೂ ಸಹ 2 ನೇ ಎದುರುದಾರರ ಬಳಿ ಕೆಲಸ ಮಾಡಿಲ್ಲ ಎಂದರೆ ಸರಿ. ಮೇಸ್ತ್ರಿ ಈರೇಶ್ ರವರ ಕೋರಿಕೆಯ ಮೇರೆಗೆ ನಾನು ಕೆಲಸಕ್ಕೆ ಹೋಗಿರುತ್ತೇನೆ ಎಂದರೆ ಸರಿ. ಆ ದಿನ ನನಗೆ ಮತ್ತು ಇತರೆ ಕೆಲಸಗಾರರಿಗೆ ಕೂಲಿ ಕೊಟ್ಟಿದ್ದು ಈರೇಶ್ ರವರು ಎಂದರೆ ಸರಿ. ಆಗಾಗಿ ನಮಗಾಗಲಿ 2 ನೇ ಎದುರುದಾರರಿಗಾಗಲಿ ಯಾವುದೇ ಸಂಬಂದ ಇಲ್ಲ ಎಂದರೆ ಸರಿ. ನನ್ನ ಮತ್ತು 2 ನೇ ಎದುರುದಾರರ ನಡುವೆ ಕಾರ್ಮಿಕ ಮತ್ತು ಮಾಲೀಕ ಸಂಬಂದ ಇರಲಿಲ್ಲ ಎಂದರೆ ಸರಿ. ಘಟನೆಯನ್ನು ನಾನು ಖುದ್ದಾಗಿ ನೋಡಿಲ್ಲ ಎಂದರೆ ಸಾಕ್ಷಿ ಆ ಸಮಯದಲ್ಲಿ ನಾನು ಸ್ಥಳದಲ್ಲಿ ಕೆಲಸ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ಘಟನೆಯಾದಾಗ ಸುಮಾರು 3 ಗಂಟೆ ಸಮಯವಾಗಿತ್ತು. ಆ ದಿನ ಸದರಿ ವಾಹನವನ್ನು 1 ನೇ ಎದುರುದಾರರಾದ ದೇವೆಂದ್ರರವರು ಚಾಲನೆ ಮಾಡುತ್ತಿದ್ದರು. ಮೃತ ಅಭಿಷೇಕ್ ರವರಿಗೆ ಸುಮಾರು 21

ವರ್ಷ ವಯಸ್ಸಾಗಿತ್ತು. ಘಟನೆ ನಡೆದ ದಿನ ಅಭಿಷೇಕ್ ರವರು 2 ನೇ ಎದುರುದಾರರ ಬಳಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿ. ನನ್ನನ್ನು ಪೋಲೀಸರು ಕ್ರಿಮಿನಲ್ ಪ್ರಕರಣದಲ್ಲಿ ಸಾಕ್ಷ್ಯದಾರನಾಗಿ ಮಾಡಿಲ್ಲ ಎಂದರೆ ಸಾಕ್ಷಿ ದೂರನ್ನು ನೀಡುವಾಗ ನಾನು ಪೋಲೀಸ್ ಠಾಣೆಗೆ ಹೋಗಿದ್ದು, ನನ್ನನ್ನು ಸಹ ಸಾಕ್ಷ್ಯದಾರನಾಗಿ ಪರಿಗಣಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಕಡೂರಿನ ವಾಸಿಯಾಗಿರುತ್ತೇನೆ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **1, 2** ಮತ್ತು **4** ನೇ ಎದುರುದಾರರ ಪರಃ ಶ್ರೀ ಎಂ ಎನ್ ವಕೀಲರಿಂದಃ</u>

**1, 2** ಮತ್ತು **4** ನೇ ಎದುರುದಾರರ ಪರ ವಕೀಲರು ಹಾಜರಿದ್ದು, 3 ನೇ ಎದುರುದಾರರು ಮಾಡಿರುವ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.